ಇ) ಸದರಿ ವರ್ಗಾವಣೆಗಳನ್ನು ಕೇವಲ ಜನತಾದಳ ಶಾಸಕರ ಶಿಫಾರಸ್ಸು ಮೇರೆಗೆ ಮಾಡಲಾಗಿದೆಯೆಂಬುದು ನಿಜವೇ?

ಈ) ಹಾಗಿದ್ದಲ್ಲಿ, ತಾವು ಅನುಸರಿಸುವ ವಿಧಾನಗಳು ಯಾವುವು?

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು):

ಅ) ವಿವಿಧ ಇಲಾಖೆಗಳಲ್ಲಿ ಮಾಡಲಾಗಿರುವ ವರ್ಗಾವಣೆಗಳ ವಿವರಗಳು ಕೇಂದ್ರೀಕೃತವಾಗಿ ಲಭ್ಯವಿರುವುದಿಲ್ಲ. ಸಂಬಂಧಿಸಿದ ಸಚಿವರಿಗೆ ಪ್ರಶ್ನೆ ಕೇಳಿ ಅವರವರ ಇಲಾಖೆಗಳಿಗೆ ಸಂಬಂಧಿಸಿದಂತೆ ಮಾಹಿತಿ ಪಡೆಯಬಹುದು.

ಆ) ದಿನಾಂಕ: 19-04-1997ರ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 04ಸೇನೌವ 97ರಲ್ಲಿನ ಮಾರ್ಗ ಸೂಚನೆಗಳಂತೆ ಮಾಡಬಹುದಾಗಿದೆ.

ಇ) ಇಲ್ಲ.

ಈ) ವರ್ಗಾವಣೆಗಳನ್ನು ಕಾಲಕಾಲಕ್ಕೆ ಹೊರಡಿಸಿರುವ ಮಾರ್ಗಸೂಚನೆಗಳನ್ನು ಅನುಸರಿಸಿ ಮಾಡಬಹುದು.

ವಿಷಯ: ಮಲೆನಾಡು ಪ್ರದೇಶಾಭಿವೃದ್ಧಿ ಕುರಿತು

2822 (4108)

ಶ್ರೀ ಮಂಜುನಾಥ ಸಿ.ಕುನ್ನೂರು (ಶಿಗ್ಗಾಂವ್): ಮಾನ್ಯ ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1997-98ನೇ ಸಾಲಿನಲ್ಲಿ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ ಎಷ್ಟು ಆಯವ್ಯಯದಲ್ಲಿ ಹಣ ಮಂಜೂರು ಮಾಡಲಾಗಿದೆ.

ಆ) ಮಲೆನಾಡು ಪ್ರದೇಶಾಭಿವೃದ್ಧಿ ಕನಿಷ್ಠ 100 ಕೋಟಿ ರೂ.ಗಳ ಹಣವನ್ನು ಪ್ರತಿ ವರ್ಷಕ್ಕೆ ನಿಗಧಿಪಡಿಸಲು ರಾಜ್ಯ ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳುವಿರಿ?

ಇ) ಮಲೆನಾಡು ಪ್ರದೇಶಾಭಿವೃದ್ಧಿಗೆ ನಬಾರ್ಡ್ ಯೋಜನೆಯಡಿ ಎಷ್ಟು ಹಣ ರಸ್ತೆ ಸೇತುವೆ ದುರಸ್ತಿಗಾಗಿ ಮಂಜೂರು ಮಾಡಲಾಗಿದೆ.

ಶ್ರೀ ಕೆ.ವೆಂಕಟೇಶ (ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು):

ಅ) 1997-98ರಲ್ಲಿ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ 30 ಕೋಟಿ ರೂ.ಗಳನ್ನು ಆಯವ್ಯಯದಲ್ಲಿ ನಿಗಧಿಪಡಿಸಲಾಗಿದೆ.

ಆ) ಇದನ್ನುಪರಿಶೀಲಿಸಲಾಗುವುದು.

ಇ) ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ ನಬಾರ್ಡ್ ನಿಂದ ಹಣ ಮಂಜೂರಾಗಿರುವುದಿಲ್ಲ.

ವಿಷಯ: ಹಸಿರು ಕಾರ್ಡು ವಿತರಣೆ

2823 (3453)

ಡಾ: ಎಂ.ಪಿ.ಕರ್ಕಿ (ಕುಮಟಾ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಡಜನತೆಗೆ ಕೊಡುವ ಹಸಿರು ಕಾರ್ಡುಗಳ ವಿತರಣೆ ನಿಲ್ಲಿಸಲಾಗಿದೆಯೇ?

ಆ) ಬಡತನದ ರೇಖೆಗಿಂತ ಕೆಳಗಿರುವ ಎಲ್ಲರಿಗೂ ಹಸಿರು ಕಾರ್ಡು ವಿತರಣೆ ಆಗಿದೆಯೇ?

ಇ) ಹಸಿರು ಕಾರ್ಡ್‌ಗೆ ಅರ್ಹರಾದ ಫಲಾನುಭವಿಗಳನ್ನು ಗುರುತಿಸಲಾಗಿದೆಯೇ?

ಶ್ರೀ ಜಿ.ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಇಲ್ಲ.

ಆ) ಇಲ್ಲ.

ಇ) ನಾವು ಇದುವರೆವಿಗೆ 61.00 ಲಕ್ಷ ಫಲಾನುಭವಿಗಳನ್ನು ಗುರುತಿಸಿದ್ದು ಮತ್ತು ಇನ್ನು ಹೆಚ್ಚಿನ ಕೆಲವರನ್ನು ಗುರುತಿಸಬೇಕಾಗಿದೆ.

ವಿಷಯ: ರಾಜ್ಯ ಲೋಕಸೇವಾ ಆಯೋಗ ಕುರಿತು

2824 (4107)

ಶ್ರೀ ಎಂ.ಮಹೇಶ್‌ಚಂದ್ (ಮದ್ದೂರು): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಲೋಕಸೇವಾ ಆಯೋಗವು ಪ್ರತಿವರ್ಷ ಇಂತಿಷ್ಟು ಹುದ್ದೆಗಳಿಗೆ ನೇಮಕ ಮಾಡಬೇಕೆನ್ನುವ ಉದ್ದೇಶವೇನಾದರೂ ಇದೆಯೆ?

ಆ) ಹಾಗಿದ್ದಲ್ಲಿ ಇದು ಕೇಂದ್ರ ಲೋಕಸೇವಾ ಆಯೋಗದ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿದೆಯೇ?